**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ8325/2022**

ಸಿ.ಡಬ್ಲ್ಯೂ –8 ಪಿ.ಡಬ್ಲ್ಯೂ -6

| | | |
|---|---|---|
| ಹೆಸರು | ಃ | ಸುಮಿತ್ರಾ |
| ತಂದೆಃಗಂಡ | ಃ | ಪ್ರಭು ಚವಾಣ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕುಶಪ್ಪನ ತಾಂಡಾ, ನರೋಣಾ |

ದಿನಾಂಕಃ 17-01-2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-7 ರವರ ಪರಿಚಯ ಇರುತ್ತದೆ. ಉಳಿದವರ ಪರಿಚಯ ಇರುವುದಿಲ್ಲ. ಮೃತ ಭಗವಂತರವರ ಪರಿಚಯ ಇರುವುದಿಲ್ಲ. ನಾವು ರೇಷನ ತುಂಬಲು ಆರೋಪಿಯ ವಾಹನದಲ್ಲಿ ಹೋಗುತ್ತಿದ್ದೇವು ಎದುರು ಬಂದ ವಾಹನ ಅತಿ ವೇಗವಾಗಿ ಬಂದು ಆರೋಪಿಯ ವಾಹನಕ್ಕೆ ಗುದ್ದಿರುತ್ತಾನೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.29.05.2022 ರಂದು ಬೆಳಗ್ಗೆ 6.45 ಗಂಟೆಗೆ ನಾನು ಮತ್ತು ಚಾಸಾ-8 ರವರು ರೇಷನ ತರಲು ಹೋರಟಿದ್ದೇವು ಎಂದರೆ ಸರಿ. ಆರೋಪಿಯ ವಾಹನ ಸಂಖ್ಯೆ ಕೆಎ-48/ಎಂ-0521 ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಚಾಸಾ-8 ಆರೋಪಿಯ ವಾಹನದಲ್ಲಿ ಕುಳಿತು ನರೋಣಾ ಗ್ರಾಮಕ್ಕೆ ಹೋಗುತ್ತಿದ್ದೇವು ಎಂದರೆ ಸರಿ. ಆಗ ಆರೋಪಿ ಭೋಧನ ಬ್ರಿಡ್ಜ ಹತ್ತಿರ ವಾಹನವನ್ನು ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಎದುರು ಬರುತ್ತಿದ್ದ ಮೋಟರ ವಾಹನಕ್ಕೆ ಆರೋಪಿ ಗುದ್ದಿರುತ್ತಾನೆ ಎಂದರೆ ಸರಿಯಲ್ಲ. ನಾನು ಕೆಳಗೆ ಇಳಿದು ನೋಡಿದಾಗ ಚಾಸಾ-1 ರವರ ಮಗ ಮೃತಪಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. ಮೃತ ಭಗವಂತ ಮುಖಕ್ಕೆ ತಲೆಗೆ ಭಾರಿ ಪೆಟ್ಟಾದ ಕಾರಣ ಮೃತಪಟ್ಟಿರುತ್ತಾರೆ ಎಂದರೆ ಸರಿ. ಮೃತಪಟ್ಟ ವ್ಯಕ್ತಿಯ ವಾಹನದ ಸಂಖ್ಯೆ ಕೆಎ-32/ಇಸಿ-4466 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-6 ರವರು ಈ ವಿಷಯವನ್ನು ಚಾಸಾ-1 ರವರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಷಯ ಮೃತರ ಕುಟುಂಬಕ್ಕೆ ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಘಟನೆ ಬಗ್ಗೆ ನಾನು ನರೋಣಾ ಪೋಲಿಸರ ಮುಂದೆ ಈ ಕಳಗೆ ಓದಿ ಹೇಳಿದಂತೆ ದಿನಾಂಕ:29.05.2022

ರಂದು ಈಗ ಓದಿ ಹೇಳಿದ ಹಾಗೇ **.............** ನೀಡಿದ ಹೇಳಿಕೆ " ಎಂದು ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-**5** ಎಂದು ಗುರುತಿಸಲಾಯಿತು. ನಿಪಿ-**5** ರಲ್ಲಿನ ಸಂಗತಿಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ** ಶ್ರೀ ಎಸ.ಎಸ.ಸಿ. **ವಕೀಲರಿಂದ**:

ಕುಶಪ್ಪನ ತಾಂಡಾ ಹಾಗೂ ನರೋಣಾ ಮದ್ಯ ಇರುವ ಮಾರ್ಗ ಕಚ್ಚಾ ರಸ್ತೆ ಎಂದರೆ ಸರಿ. ಆರೋಪಿಯ ವಾಹನ ಕಚ್ಚಾ ರಸ್ತೆ ಇದ್ದ ಕಾರಣ ನಿಧಾನವಾಗಿ ಹೋಗುತ್ತಿತ್ತು ಎಂದರೆ ಸರಿ. ಮೃತರ ದ್ವಿಚಕ್ರವಾಹವೇ ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ಆರೋಪಿಯ ಕ್ರೂಸರನ ಚಾಲಕನ ಕಡೆಗೆ ಗುದ್ದಿರುತ್ತದೆ ಎಂದರೆ ಸರಿ. ದ್ವಿಚಕ್ರವಾಹನದ ಚಾಲಕ ಇಯುರಫೋನ ಹಾಕಿಕೊಂಡು ಗಾಡಿ ಚಲಾಯಿಸುತ್ತಿದ್ದ ಎಂದರೆ ಸರಿ. ಅಪಘಾತವಾದಾಗ ನಾನು ಹಾಗೂ ಚಾಸಾ-8 ರವರು ಹೊರತು ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಅಪಘಾತ ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.